**Andolana**

**Date:** 11-03-2021 **Page No:** 4

**Edition:** Mysore **Language:** Kannada

# ಎಸ್‌ಡಿಎಂಐಎಂಡಿ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ

ಮೈಸೂರು: ಎಸ್‌ಡಿಎಂಐಎಂಡಿ ಸಂಸ್ಥೆಯ ವತಿಯಿಂದ 'ನಾಯಕತ್ವದಲ್ಲಿ ಮಹಿಳೆಯರು' ವಿಷಯ ಕುರಿತು ಆನ್‌ಲೈನ್ ಮುಖಾಂತರ ಪ್ಯಾನೆಲ್ ಸಂವಾದ ನಡೆಯಿತು. ಡಾ.ನೀತು ಗಣಪತಿ ಕಾರ್ಯಕ್ರಮಕ್ಕೆ ಆಗಮಿಸಿದ್ದವರನ್ನು ಸ್ವಾಗತಿಸಿ, ಸಮಾಜದಲ್ಲಿ ಮಹಿಳೆಯರು ನಿಭಾಯಿಸುವ ಪಾತ್ರದ ಬಗ್ಗೆ ತಿಳಿಸಿದರು.




ಎಸ್‌ಡಿಎಂಐಎಂಡಿ ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್ ಮಾತನಾಡಿ, ಪ್ರತಿವರ್ಷ ಹೆಚ್ಚು ಹೆಚ್ಚು ಹೆಣ್ಣು ಮಕ್ಕಳನ್ನು ಕಾಲೇಜಿಗೆ ಸೇರಿಸಿ ಅವರಿಗೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಸಂಸ್ಥೆಯು ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ನೀಡುತ್ತಿದೆ ಎಂದರು.

ಎಟಿಐನ ಜಂಟಿ ಮಹಾನಿರ್ದೇಶಕರಾದ ಡಾ.ಬಿ.ಆರ್.ಮಮತಾ, ಅಪೋಲೊ ಬಿಜಿಎಸ್ ಆಸ್ಪತ್ರೆಯ ಮನೋವೈದ್ಯ, ಸಲಹೆಗಾರರಾದ ಡಾ. ಆರತಿ ಬೆಹ್ಲ್, ಆರ್ ಪ್ರೋಸೆಸ್ ಔಟ್ ಸೋರ್ಸಿಂಗ್ ಸರ್ವಿಸಸ್ ಪ್ರೈ.ಲಿ.ನ ಸವಿತಾ ಮಲ್ಲಪ್ಪ, ಸಂಸ್ಥೆಯ ಪ್ರಾಧ್ಯಾಪಕರಾದ ಡಾ.ಮೌಸುಮಿ ಸೇನ್ ಗುಪ್ತ ಚರ್ಚೆ ನಡೆಸಿದರು.

ಡಾ.ಆರತಿ ಮಾತನಾಡಿ, ಪುರುಷರಿಗಿಂತ ಸ್ತ್ರೀಯರು ಹೆಚ್ಚು ಅಭಿವ್ಯಕ್ತಿಶೀಲರಾಗಿದ್ದು, ಈ ಗುಣವೇ ಅವರ ಶಕ್ತಿಯಾಗಿರುತ್ತದೆ ಎಂದರು.

ಸವಿತಾ ಅವರು ಮಾತನಾಡಿ, ಜವಾಬ್ದಾರಿಯುತ ಸ್ಥಾನಗಳಲ್ಲಿರುವ ಮಹಿಳೆ ಕೌಟುಂಬಿಕ ಕಾರಣದಿಂದ ಕೆಲಸ ಬಿಡಬೇಕಾದ ಸಂದರ್ಭ ಬಂದು, ನಂತರ ಹಿಂದಿರುಗಲು ಸಾಧ್ಯವಾಗದಿರುವುದು ಸಾಮಾನ್ಯ ವಾಗಿದೆ ಎಂದರು.